Regd No M 1299 SATYAVADI Founded 1917
The Oldest Newspaper of Mysore

ಸತ್ಯವಾದಿ

ರಾಷ್ಟ್ರೀಯ ವಾರ್ತಾಪತ್ರಿಕೆ
(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 31 ಸಂಚಿಕೆ 162] ಮಂಗಳವಾರ 18—5—48 [ಬಿಡಿ ಪ್ರತಿ 3 ಪೈ

— ಪ್ರಬಲ ರಾಷ್ಟ್ರಗಳಿಗೆ ಈಜಿಪ್ಟಿನ ಎಚ್ಚರಿಕೆ —

ಕೈರೊ ಮೆ 17 — ಯಹೂದಿಗಳಿಗೆ ಕಳುಯಿಸಿಕೊಡುವಂಥ ಆಯುಧ ನಾವೆಗ ನ್ನು ಅಪಹರಣ ಮಾಡುವುದಾಗಿ ಈಜಿ ಪ್ಟು ಪ್ರಭುತ್ವ ಪ್ರಬಲ ರಾಷ್ಟ್ರಗಳಿಗೆ ಗೊತ್ತಪಡಿಸಿದೆ. ಪ್ಯಾಲಿಸ್ಟೈನು ಪ್ರಾದೇಶಿಕ ಸಮುದ್ರವು ವಿದೇಶೀ ನಾ ವೆಗಳಿಗೆ ' ಅಪಾಯಕರ ' ಎಂದು ಪರಿ ಗಣಿಸಲಾಗಿದೆಯೆಂದು ಈಜಿಪ್ಟು ಪ್ರಭು ತ್ವ ತಿಳಿಯಪಡಿಸಿದೆ

ಗಾಂಧೀಜಿಯವರ ಒಂದು ಕಂಚಿನ ಪ್ರತಿಮೆ ಮತ್ತು ಒಂದು ಸಾದಾ ಪ್ರತಿ ಮೆಯನ್ನು ಕೊಂಡುಕೊಳ್ಳ ಬೇಕೆಂದು ಮಂಗಳೂರು ಮುನಿಸಿಪಲ್ ಕೌನ್ಸಿಲ್ ನಿರ್ಧರಿಸಿದೆ

ಪಾಕಿಸ್ತಾನ ಪಾರ್ಲಿಮೆಂಟಿನ ಮುಸ್ಲಿಂ ಲೀಗಿನ ಸಭೆ ನಾಯಕ ಲಿಯಾ ಖತ್ ಅಲ್ಲೀಖಾನರ ಅಧ್ಯಕ್ಷತೆಯಲ್ಲಿ ತು ರುತು ಸಮಾವೇಶಗೊಂಡು ಪ್ಯಾಲಿಸ್ಟೈ ನ್ ಅರಬ್ ಹೋರಾಟಕ್ಕೆ ಬೆಂಬಲ ಕೊಡುವ ನಿರ್ಣಯವನ್ನು ಅಂಗೀಕರಿಸಲಾಯಿತು

ಲೇಕ್ ಸಕ್ಸೆಸ್— ನೂತನ ಯ ಹೂದಿ ಸ್ವರಾಜ್ಯ ಇಸ್ರಾಯೆಲ್ ರಾ ಷ್ಟ್ರದ ಮೇಲಿನ ಅರಬ್ ಧಾಳಿ ಪರಿಶೀ ಲನೆ ಬಗ್ಗೆ ಈ ದಿನ ಪ್ರಬಲ ಪಂಚ ರಾ ಷ್ಟ್ರಗಳು ಭದ್ರತಾ ಸಮಿತಿಯಲ್ಲಿ ತುರ ತು ಸಭೆ ಸೇರುವುದು

ಸಿರಿಯಾ ಮತ್ತು ಇರಾಕ್ ದಳಗಳ ಪ್ಯಾಲಿಸ್ಟೈನು ಉತ್ತರ ಭಾಗದಲ್ಲಿ ಸಂ ಧಿಸಿವೆ ಎಂದು ಡಮಾಸ್ಕಸ್ಸಿನ ಸುದ್ದಿ

ಸಂಯುಕ್ತ ಪ್ರಾಂತ್ಯ ಅಕ್ಷರ ಸಚಿವ ಸಂಪೂರ್ಣಾನಂದರು ಕಾಶಿ ನಾಗ್ರಿ ಪ್ರ ಚಾರಿಣಿ ಸಭೆಯಲ್ಲಿ ಇಂಗ್ಲೀಷು ಪದಗು ಳನ್ನು ಉಪಯೋಗಿಸಿ ಇತ್ತ ಭಾಷಣ ಕ್ಕಾಗಿ 5 ಆಣೆ ಜುಲ್ಮಾನೆ ವಿಧಿಸಲಾಯಿ ತು. ಪರದೇಶ ಭಾಷಾ ಪದಪ್ರಯೊ ಗ ಕೂಡದೆಂದು ಸಭೆ ಬಹಿಷ್ಕರಿಸಿದೆ ಪರದೇಶೀ ಪದ ಪ್ರಯೋಗ ಒಂದಕ್ಕೆ ಜುಲ್ಮಾನೆ ಒಂದು ಆಣೆ ! ಸ ಚಿ ವ ರು ಆ ಸಭೆಯ ಅಧ್ಯಕ್ಷರು !

ಗೋರಕ್ಷಣೆ ಕುರಿತು ಗಾಂಧೀಜೀಯವರ ದಿವ್ಯ ವಾಣಿ

ಗೋವಧ ಎಷ್ಟರತನಕ ನಡೆಯುತ್ತಿ ರುವುದೋ ಅಷ್ಟರತನಕ ನನ್ನ ವಧವೇ ನಡೆಯುತ್ತಿದೆಯೆಂದು ತಿಳಿಯುತ್ತೇನೆ.

ಗೋವಿನ ಪ್ರಾಣ ಉಳಿಸಲು ಯಾರು ತನ್ನ ಪ್ರಾಣವನ್ನು ಕೊಡಲು ಸಿದ್ಧವಿ ಲ್ಲವೋ ಅತನು ಹಿಂದುವಲ್ಲ.

ನನ್ನ ಅಭಿಪ್ರಾಯದಂತೆ ಗೋಹತ್ಯ ನರಹತ್ಯೆಗಳೆರಡೂ ಸಮವೇ.

ಹಿಂದೂಸ್ಥಾನದಲ್ಲಿ ಹಿಂದೂಗಳ ಒಡ ನಾಟದಲ್ಲಿದ್ದು ಗೋಹತ್ಯಮಾಡುವುದು ಹಿಂದೂವಿನ ಹತ್ಯಮಾಡಿದಂತೆಯೇ.

ಗೋಹತ್ಯೆಯಿಂದ ಯಾರಿಗಾದರೂ ನನ್ನಿಂದ ಹೆಚ್ಚು ದುಃಖವಾಗುವುದೆಂಬು ದನ್ನು ನಾನು ಒಪ್ಪುವುದಿಲ್ಲ.

ಮು[illegible] ಕುಂಟು, ಬರಡು ಪಶುಗಳ ರಕ್ಷ[illegible] ಯಾರೂ ಮಾಡದಿದ್ದರೆ ರಾ[illegible]ಬೇಕು.

[illegible]ಷ್ಯ ಪ್ರಜೆಗಳ ಜೀ[illegible] ಪ್ರಜೆಗಳೆಂದು ಆವ ಶ್ಯ[illegible].

ಹಿಂದೂಧರ್ಮದ ಬಾಹ್ಯ ಲಕ್ಷಣಗ ಳಲ್ಲಿ ಅತಿ ಮುಖ್ಯವಾವುದೆಂದು ಯಾ ರಾದರೂ ನನ್ನನ್ನು ಕೇಳಿದರೆ ಗೋರಕ್ಷಣೆ ಎನ್ನುವೆನು.

ಗೋರಕ್ಷಣೆಯು ಹಿಂದೂ ಧರ್ಮವು ಜಗತ್ತಿಗೆ ಕೊಟ್ಟಿರುವ ವರಪ್ರಸಾದ, ಹಾ ಗೂ ಗೋರಕ್ಷಣೆ ಮಾಡುವ ಹಿಂದುವಿರು ವತನಕವೂ ಹಿಂದೂಧರ್ಮವಿರುವುದು.

ನನ್ನ ಅಭಿಪ್ರಾಯದಂತೆ ಸ್ವರಾಜ್ಯದ ಪ್ರಶ್ನೆಯಷ್ಟೇ ಗೋರಕ್ಷಣಪ್ರಶ್ನೆ ಮಹತ್ವ ದ್ದಾಗಿದೆ.

Save the Cow

ಗೋ ವನ್ನ

Bangalore Races 1948

ಮೇ : 26 29 ಜೂನ್ : 2 5 9 12 19 23 26 30 ಜುಲೈ : 3 ರಲ್ಲೂ
ಬುಕ್ ಮೇಕರ್ಸ್ — ಟೋಟಲೈಜೇಟರ್ಸ್
ರೂ. 2/- ಸ್ವೀಪ್ ಮತ್ತು ರೂ. 5/- ಟ್ರಬಲ್ ಈವೆಂಟ್
ಒಂದನೇ ಟೋಟ್ ರೂ. 10. ಎರಡನೇ ಟೋಟ್ ರೂ. 5
ಪ್ರವೇಶ { ಒಂದನೇ ತರಗತಿ – ಪುರುಷರು – ರೂ. 6 ದಿನಕ್ಕೆ
,, ,, ಸ್ತ್ರೀಯರು– ರೂ. 4 ,,
ಎರಡನೇ ,, ಪುರುಷರು } ರೂ. 2 ,,

ಗಾಂಧೀಯವರಿಗೆ

.... ಸೊನ್ನೆ ಮಾರ್ಕು ....

ಆಗಾಖಾನ್ ಅರಮನೆಯಲ್ಲಿ ಬಂದಿ ಯಾಗಿದ್ದಾಗ ಗಾಂಧೀಜಿಯವರು, ಒಂ ದು ಚಿಕ್ಕ ಪರೀಕ್ಷೆಯಲ್ಲಿ ಸೋತ ಘಟನೆ ಯು ಪ್ರಕಟವಾಗಿದೆ ' ಗಾಂಧೀಜಿಯ ವರ ಜನ್ಮದಿನೋತ್ಸವ (ಅಕ್ಟೋಬರ್ 2) ಆಚರಿಸುವಾಗ, ಅವರ ಸಹಖೈದಿಗಳು ಒಂದು ಸ್ಪರ್ಧೆ ಏರ್ಪಡಿಸಿದರು; ಸ್ಪರ್ಧೆ ಯಲ್ಲಿ ಪ್ರಸಿದ್ಧ ವ್ಯಕ್ತಿಗಳ ಭಾಷಣಗ ಳಿಂದ ಮತ್ತು ಗ್ರಂಥಗಳಿಂದ ಕೆ ಲವು ಪಂಗ್ತಿಗಳನ್ನೆತ್ತಿ ' ಇವು ಯಾರ ಮಾತು ಗಳು ' ಎಂದು ಪ್ರಶ್ನಿಸಿದರು. ಇಂತ ಹ ಮೂರು ಪ್ರಶ್ನೆಗಳನ್ನು ಗಾಂಧೀಜೀ ಯವರಿಗೆ ಕೇಳಲಾಯಿತು : ಗಾಂಧೀ ಜೀಯವರು ಕೊಂಚ ಆಲೋಚಿಸಿ ಒಂ ದು ಥೋರಿಯೋ — ಎರಡು ಎಮ ರ್ಸ್ — ಮತ್ತು ಮೂರನೆಯದು ರ ವೀಂದ್ರ ಠಾಕೂರ್ ಅಥವಾ ರಷ್ಯ ದ ಟಾಲಸ್ಟಾಯ್ ಎಂದರು ; ಎಲ್ಲರೂ ಘೊಳ್ಳೆಂದು ನಕ್ಕರು ! ನೋಡಲಾಗಿ ಮೂರೂ ವಿಷಯಗಳೂ ಮೋಹನದಾಸ ಕರಮಚಂದ ಗಾಂಧಿಯವರ ಭಾಷಣ ಗಳಿಂದಲೂ ಗ್ರಂಥಗಳಿಂದಲೂ ಅಯ್ದ ವಿಷಯಗಳಾಗಿದ್ದವು ! ಗಾಂಧೀಜೀ ಯವರೇ ಅದನ್ನು ತಿಳಿದಿರಲಿಲ್ಲ. (ಪ್ರ)

ಇಂಡೋನೇಷಿಯಾಹಲ್ಲಿ ಸುಮಾರು 130 ರಾಜರು ಮತ್ತು ಸುಲ್ತಾನರು ಇ ರುವರು : ಇಂಡೋನೇಷ್ಯಾ ಪ್ರಜಾಪ್ರ ಭುತ್ವದಲ್ಲಿ ಇವರ ಭವಿಷ್ಯವೇನೆಂಬ ಪ್ರಶ್ನೆಯೆದ್ದಿದೆ ; ಈ ಬಗ್ಗೆ ಮಾತುಕತೆ ಗಳಿಗಾರಂಭವಾಗಿದೆ

ವುಡ್ ಲ್ಯಾಂಡ್ಸ್

ಜನನಿಬಿಡ 2 ನೇ ವಾರ
ಮಾಡರ್ನ್ ಥಿಯೇಟರ್ಸ್‌ರವರ —
ಮನಮೋಹನ ನೃತ್ಯ, ಮಧುರ ಸಂಗೀತ
ರಮ್ಯ ಕಥೆಯ ಸುಂದರ ತಮಿಳು ಚಿತ್ರ.
೧೦೦೦ ತಲೈವಾಂಗಿ

ಅಪೂರ್ವ ಚಿಂತಾಮಣಿ

ಪಾತ್ರ — ಪಿ. ಎಸ್. ಗೋವಿಂದ್
ಎಂ. ಆರ್. ಸ್ವಾಮಿನಾಥ್
ಕಾಳಿ ಎನ್. ರತ್ನಂ. ವಿ. ಎನ್. ಜಾನಕಿ,
ರಾಜಾಕಾಂತಂ ಮುಂತಾದವರು
ಪ್ರತಿ ದಿನ 3 ಆಟಗಳು

Released by Rajlakhmi Pictures
Gandhinagar, Bangalore City

ಹೈದರಾಬಾದು ವಿದ್ಯಾರ್ಥಿ ಮುಖಂಡರ ಭಾಷಣ

— —

ನಾಳೇ ತಾ || 19 ನೇ ಬುಧವಾರ ಸಾಯಂಕಾಲ 6 ಗಂಟೆಗೆ ಸದ್ಯಾರ್ಥಿ ಕಾಂಗ್ರೆಸ್ ಕೆಲಸಗಾರರ ಸಭೆಯು ಸಯ್ಯಾಜಿರಾವ್ ರಸ್ತೆಯಲ್ಲಿರುವ ನಗರದ ಕಾಂಗ್ರೆಸ್ ಕಾರ್ಯಾಲಯದಲ್ಲಿ — ಹೈದರಾಬಾದಿನ ಜನತಾ ಹೋರಾಟದಲ್ಲಿ ಸಂಪೂರ್ಣ ಜನ ಧನ ಸಹಾಯವನ್ನು ನೀಡಲು ಕೈಗೊಳ್ಳಬೇಕಾದ ಕಾರ್ಯಕ್ರಮವನ್ನು ಗೊತ್ತುಪಡಿಸುವುದಕ್ಕಾಗಿ ನಡೆಯುವುದು. ಹೈದರಾಬಾದಿನಿಂದ ಬಂದಿರುವ ವಿದ್ಯಾರ್ಥಿ ಮುಖಂಡರಾದ ಶ್ರೀ ಎಸ್ ಎಸ್ ರಘುನಾಥರೆಡ್ಡಿಯವರು ಭಾಷಣ ಮಾಡುವರು. ವಿದ್ಯಾರ್ಥಿಗಳೆಲ್ಲರೂ ತಪ್ಪದೆ ಭಾಗವಹಿಸಬೇಕೆಂದು ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ ಕಾರ್ಯದರ್ಶಿಗಳು ಪ್ರಾರ್ಥಿಸುತ್ತಾರೆ.

ಪ್ರಭಾದಲ್ಲಿ — ಹಂ ಏಕ್ ಹೈ

Edited, Printed and Published by M S Krishna Rao at the Satyavadi Press, Chamaraj Agrahar, Mysore

ಪ್ರೆಸ್ ನೋಟು

ಬೆಂಗಳೂರು ನೆ॥ 17— ರೈಲ್ವೆಯಲ್ಲಿ ಸಂಮಾನು ಸಾಗಿಸುವ ದರ ಹೆಚ್ಚಿಸಲಾಗಿರುವುದರಿಂದ, ಹಾಸನ ಮೈಸೂರು ಶಿವಮೊಗ್ಗಾಗಳಿಸದ ಬರುವ ಗಟ್ಟಿ ವುರದ ಬೆಲೆ 2 ರೂ. ಹೆಚ್ಚಿರುವುದರಿಂದಲೂ ಗಟ್ಟಿ ಕಾಡುಮರ ಉಂಡೆ ರೂ 1 ಕ್ಕೆ ಮೂರೂಕಾಲು ಮಣದಂತೆಯೂ, ಒಡಿದದ್ದು ಎರಡೂ ಮುಕ್ಕಾಲು ಮಣದಂತೆ ದರವಿಟ್ಟಿದೆ.

ಬೆಂಗಳೂರು — ಅಂಗಡಿ ನೌಕರರ ಶಾಸನವು ಜೂ॥ 1 ರ ಹೊತ್ತಿಗೆ ಜಾರಿಗೆ ಬರುವುದೆಂದು ತಿಳಿಯಬಂದಿದೆ

At Opera

From 14–5–48

King of Mounties

A Republic serial in 12 thrilling Parts

ಕಿಂಗ್ ಆಫ್ ಮೌಂಟೀಸ್ ಸೀರಿಯಲ್] ಪ್ರತಿ ದಿನ 3 ಆಟಗಳ

ಪ್ರಭಾ

21–5–48 ರಿಂದ — ದಿನವಹಿ 3 ಆಟಗಳು

ಖಿಡ್ಕಿ (ಹಿಂದಿ)



ಪಾತ್ರ : ರೆಹನಾ, ಮುಮ್ತಾಜ್

ಅಂದ, ಚಂದ, ಗುಣ, ಇವೆಲ್ಲಕ್ಕೂ

ಮೈಸೂರು

ಮರದ ಸಾಮಾನುಗಳು

ಸಹಜವಾದ ಅಚ್ಚುಕಟ್ಟು, ನಾಜೂಕಾದ ಮೈಕಟ್ಟು

ಸೌಂದರ್ಯ, ನಿಸ್ಸಂಶಯವಾದ ಗುಣ. ಇವೆಲ್ಲವನ್ನೂ ಹೊಂದಿರುವುವು

ಉಪಯೋಗಿಸುವವರೆ ಅನುಕೂಲಾದಿಗಳನ್ನು ವಿಮರ್ಶಿಸಲಿ

ಅವರವರ ಇಷ್ಟಾನುಗುಣವಾಗಿ, ಕುಶಲಗಾರರಾದ ಕೆಲಸಗಾರರಿಂದ

ಸಾಮಾನುಗಳನ್ನು ತಯಾರಿಸಿ ಕೊಡುತ್ತೇವೆ.

ಶ್ರೀ ಚಾಮರಾಜೇಂದ್ರ ಟೆಕ್ನಿಕಲ್ ಇನ್ಸ್ಟಿಟ್ಯೂಟ್

ಮೈಸೂರು

ಹೊಸ ಬೆಳೆಯ, ಆರಿಸಿ ತೆಗೆದ, ಪರಿಶುದ್ಧವಾದ

ಶ್ರೀ 'ಓಂ' ಗುರುತಿನ ಕೇಸರಿ

ಈ ಓಂ ಗುರುತಿನ ಕೇಸರಿ ಅತಿ ಪರಿಶುದ್ಧವಾದುದಕ್ಕೆ ಗ್ಯಾರಂಟಿಯಿದು. ಸ್ಪೇನಿನ ಕೇಸರಿ ಗಿಡಗಳಲ್ಲಿಯ ಹೂಗಳಿಂದ ಆರಿಸಿ ತೆಗೆದುದಾಗಿದೆ. ನಮ್ಮಿಂದ ಸ್ಪೆಷಲ್ಲಾಗಿ ಆಮದು ಮಾಡಲ್ಪಟ್ಟಿರತಕ್ಕದ್ದು. ಬಹು ಹೊಳಪಿನಿಂದಲೂ ಸುವಾಸನೆಯಿಂದಲೂ ಕೂಡಿದುದಾಗಿದೆ. ಏನೊಂದೂ ಆಕ್ಷೇಪಣೀಯ ಪದಾರ್ಥಗಳೂ ಸೇರಿಲ್ಲ. ಮತ್ತು ಧಾರ್ಮಿಕವಾಗಿ ಪರಿಶುದ್ಧವಾಗಿದೆ. ದೇವಸ್ಥಾನಗಳಲ್ಲಿಯೂ, ದೇವರ ಪೂಜೆಗೂ, ಔಷಧಗಳಿಗೂ, ಮತ್ತು ತಿಂಡಿಪದಾರ್ಥಗಳಿಗೂ ಉಪಯೋಗಿಸಲ್ಪಡಲು ಅರ್ಹವಾಗಿದೆಯೆಂದು ಶಿಫಾರಸ್ಸು ಮಾಡಲಾಗಿದೆ. ½ ತೋಲಾ, 1 ತೋಲಾ, 5 ತೋಲಾ, ಡಬ್ಬಿಗಳಲ್ಲಿಯೂ, ಬಿಲ್ಲರೆಯಾಗಿಯೂ ದೊರೆಯುತ್ತದೆ. ಉಪಯೋಗಿಸಬೇಕಾಗಿ ವಿನಂತಿ

ವಲ್ಲಭದಾಸ್ ತೇಜ್ಪಾಲ್

೧೪ ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸ್.

SHAKTI

SUDHA

TONIC